**ಮೂ.ದಾ.ನಂ.48/2016**

ಪಿ.ಡಬ್ಲ್ಯು.1

(ಇಂದು ದಿನಾಂಕ 03-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ. ಡಿ.ಎಸ್.ಬಿ ವಕೀಲರಿಂದಃ**

ದಾವಾ ಜೊತೆಗೆ ಹಾಜರುಪಡಿಸಿದ ಹಾತ್ ನಕಾಶೆಯನ್ನು ತಯಾರು ಮಾಡಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಹಾತ್ ನಕಾಶೆಯನ್ನು ತಯಾರಿಸುವ ಪೂರ್ವದಲ್ಲಿ ನಾನು ಪ್ರತಿಯೊಂದು ಸರ್ವೆ ನಂಬರನ್ನು ಸರ್ವೇ ನಕಾಶೆಯನ್ನು ನೋಡಿರುವುದಿಲ್ಲ ಆದರೆ ಗ್ರಾಮ ನಕಾಶೆಯನ್ನು ನೋಡಿಕೊಂಡು ಮಾಹಿತಿಯನ್ನು ನೀಡಿರುತ್ತೇನೆ. ಸದ್ರಿ ಗ್ರಾಮ ನಕಾಶೆಯ ಪ್ರತಿಯನ್ನು ವಕೀಲರಿಗೆ ನೀಡಿರುತ್ತೇನೆ. ಸದ್ರಿ ಗ್ರಾಮ ನಕಾಶೆಯ ಪ್ರತಿಯನ್ನು ನಮ್ಮ ಪರವಾಗಿ ಹಾಜರು ಪಡಿಸಿದ್ದೇವೋ ಇಲ್ಲವೋ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಸರ್ವೆ ನಂ. 312 ಹಿಸ್ಸಾ 1 ಸ್ಥಳವು ನಾಗೇಶ ವೆಂಕಟರಮಣ ಭಟ್ಟ ಇವರಿಗೆ ಸೇರಿದ ಸ್ಥಳ ಎಂದರೆ ಸರಿ. ನಾಗೇಶ ವೆಂಕಟರಮಣ ಭಟ್ ಇದರ ಸರ್ವೆ ನಂ. 312 ಹಿಸ್ಸಾ 1 ರ ಸ್ಥ,ಳವು ಸರ್ವೆ ನಂ. 313 ಹಿಸ್ಸಾ 3 ರ ಸ್ಥಳಕ್ಕೆ ಲಗತ್ತಾಗಿದೆ ಎಂದರೆ ಸರಿ. ಸರ್ವೆ ನಂ. 313/3 ರ ದಕ್ಷಿಣ ದಿಕ್ಕಿಗೆ ಸರ್ವೆ ನಂ. 312/1 ಬರುತ್ತದೆ ಎಂದರೆ ಸರಿ.

ಸರ್ವೆ ನಂ. 316 ಹಿಸ್ಸಾ 3 ಹಾಗೂ 312 ಹಿಸ್ಸಾ 1 ರ ನಡುವೆ 3 ರಿಂದ 4 ಬೇರೆ ಬೇರೆ ಸರ್ವೆ ನಂಬರಗಳುಇವೆ ಎಂದರೆ ಸರಿ. ಸರ್ವೆ ನಂಬರ 312 ಹಿಸ್ಸಾ 1 ರಲ್ಲಿ ಯಾವುದೇ ಕಾಲುದಾರಿಯಾಗಲೀ ನೀರು ದಾರಿಯಾಗಲೀ ಇರುವುದಿಲ್ಲ. ವಕೀಲರು ಹಾತ್ ನಕಾಶೆಯನ್ನು ತಯಾರಿಸಿದ ಮೇಲೆ ನಾನು ಅದನ್ನು ಪರಿಶೀಲಿಸಿರುತ್ತೇನೆ. ಈಗ ತೋರಿಸಿದ ದಾಖಲೆಯು ನಾನು ದಾವಾ ಪತ್ರದೊಂದಿಗೆ ಹಾಜರುಪಡಿಸಿದ ಹಾತ್ ನಕಾಶೆಯಾಗಿರುತ್ತದೆ ಎಂದರೆ ಸರಿ. ಸರ್ವೆ ನಂ. 316 ಹಿಸ್ಸಾ 3 ರ ದಕ್ಷಿಣ ದಿಕ್ಕಿಗೆ

312 ಹಿಸ್ಸಾ 1 ಬರುತ್ತದೆ ಹಾಗೂ ಸರ್ವೆ ನಂ. 312 ಹಿಸ್ಸಾ 1 ರಲ್ಲಿ ದಾವಾ ದಾರಿ ಇದೆ ಎಂದು ನಮ್ಮ ಹಾತ್ ನಕಾಶೆಯಲ್ಲಿ ನಮೂದಿಸಿಕೊಂಡಿರುತ್ತೇವೆ ಎಂದರೆ ಸರಿ. ಸರ್ವೆ ನಂ. 316 ಹಿಸ್ಸಾ 3 ರ ಪೂರ್ವ ದಿಕ್ಕಿನಲ್ಲಿ ಸರ್ವೆ ನಂ. 316 ಹಿಸ್ಸಾ 1, 4 ರಿಂದ 8 ರ ಹಿಸ್ಸಾ ನಂಬರ ಸ್ಥಳಗಳು ಇವೆ ಎಂದರೆ ಸರಿ. ಈ ಹಿಸ್ಸಾ ನಂಬರಗಳ ನಂತರದಲ್ಲಿ ಪ್ರತಿವಾದಿಗಳ ಮನೆಗೆ ಹೋಗುವ ಓಣಿ ದಾರಿ ಇದೆ ಎಂದರೆ ಸರಿ. ಹಾತ್ ನಕಾಶೆ ತಯಾರು ಮಾಡುವಾಗ ನಮ್ಮ ವಕೀಲರಿಗೆ ಮಾಹಿತಿ ಕೊಡುವಾಗ ಸರ್ವೆ ನಂ. 316 ಹಿಸ್ಸಾ 3 ಹಾಗೂ ಪ್ರತಿವಾದಿಗಳ ಮನೆಗೆ ಹೋಗುವ ನಡುವೆ ಸರ್ವೆ ನಂ. 316 ಹಿಸ್ಸಾ 1, 4 ರಿಂದ 8 ರ ಸ್ಥಳಗಳು ಇವೆ ಎಂಬ ಬಗ್ಗೆ ಮಾಹಿತಿಯನ್ನು ನಾನು ನೀಡಿದ್ದೇನೋ ಇಲ್ಲವೋ ಎಂಬ ಬಗ್ಗೆ ನನಗೆ ನೆನಪಿಲ್ಲ.

ಸರ್ವೆ ನಂಬರ 314 ಹಿಸ್ಸಾ 8 ರ ಸ್ಥಳವು ನನ್ನ ಸ್ವಂತ ಜಾಗವಾಗಿರುತ್ತದೆ. ಸರ್ವೆ ನಂ. 314 / 8 ರಲ್ಲಿ ಬಾವಿ ಹಾಗೂ ಪಂಪ ಸೆಟ್‌ಗಳು ಇರುತ್ತದೆ ಎಂದರೆ ಸರಿ. ಸರ್ವೆ ನಂ. 314 ಹಿಸ್ಸಾ 8 ರ ಪಂಪ ಸೆಟ್ ನಿಂದ ಅದರ ಭಾಗಾಯತ ಸ್ಥಳಗಳಿಗೆ ನೀರು ಸರಬರಾಜು ವ್ಯವಸ್ಥೆ ಇದೆ ಎಂದರೆ ಸರಿ. ಸರ್ವೆ ನಂ. 316 ಹಿಸ್ಸಾ 1 ಜಾಗವು ಯಾಗಿಗೆ ಸಂಭಂಧಪಟ್ಟಿದೆ ಎಂದು ಗೊತ್ತಿಲ್ಲ. ಸರ್ವೆ ನಂ. 317 ಹಿಸ್ಸಾ 5 ಬ ಜಾಗವು ಯಾಗಿಗೆ ಸಂಭಂಧಪಟ್ಟಿದೆ ಎಂದು ಗೊತ್ತಿಲ್ಲ. ನಮ್ಮ ಮನೆಯ ಸರ್ವೆ ನಂ. 316 ಹಿಸ್ಸಾ 3 ರ ಉತ್ತರ ದಿಕ್ಕಿನಲ್ಲಿ 316 ಹಿಸ್ಸಾ 1 ರ ಸ್ಥಳ ಇದ್ದು, ಅದರ ನಂತರ ಸರ್ವೆ ನಂ. 317 ಹಿಸ್ಸಾ 5 ರ ಜಾಗವು ಬರುತ್ತದೆ ಸದ್ರಿ ಜಾಗವು 2 ನೇ ವಾದಿಗೆ ಸೇರಿದ ಜಾಗ ಆಗಿರುತ್ತದೆ. ಸದ್ರಿ ಜಾಗದಲ್ಲಿ ಬೋರವೆಲ್ ಇರುತ್ತದೆ ಎಂದರೆ ಸರಿ. ಸರ್ವೆ ನಂ. 317 ಹಿಸ್ಸಾ 5 ಬ ರ ಜಾಗದಲ್ಲಿ ಇದ್ದ ಬೋರವೆಲ್ ನಿಂದ 2016 ನೇ ಇಸ್ವಿಯಿಂದ ಸರ್ವೆ ನಂ.316 ಹಿಸ್ಸಾ 3 ರಲ್ಲಿ ಇರುವ ನಮ್ಮ ಮನೆಗಳಿಗೆ ನೀರಿನ ಪೂರೈಕೆ ಇದೆ ಎಂದರೆ ಸರಿ. ಸರ್ವೆ ನಂ.316 ಹಿಸ್ಸಾ 3 ರಲ್ಲಿ 3 ನೇ ವಾದಿಗೆ ಸೇರಿದ ಜಾಗದಲ್ಲಿ ಒಂದು ಬಾವಿ ಇದೆ ಎಂದರೆ ಸರಿ. ಸದ್ರಿ ಬಾವಿಯಿಂದ ಕೆಲವೊಂದು ತಿಂಗಳ ಕಾಲ ಅವರು ನೀರನ್ನು ಉಪಯೋಗಿಸಿಕೊಳ್ಳುತ್ತಾರೆ ಆ ನಂತರ ಈ ಮೇಲೆ ಹೇಳಿದಂತಹ ಬೊರವೆಲ್ ನ ನೀರನ್ನು ಉಪಯೋಗಿಸಿಕೊಳ್ಳುತ್ತಾರೆ.

ಸರ್ವೆ ನಂ.314 ಹಿಸ್ಸಾ 1 ರ ಸ್ಥಳವು 2 ನೇ ವಾದಿಯವರ ಸ್ಥಳವಾಗಿರುತ್ತದೆ. 2 ನೇ ವಾದಿಯವರು 317 ಹಿಸ್ಸಾ 5 ಬ ದಲ್ಲಿರುವ ಬೊರವೆಲ್ ನಿಂದ ಪ್ರತಿವಾದಿಯವರ ಮನೆಗೆ ಹೋಗುವ ಓಣಿಯ ಮೂಲಕ ಸರ್ವೆ ನಂ.314 ಹಿಸ್ಸಾ 1 ರವರೆಗೂ ಪೈಪಲೈನನ್ನು ಮಾಡಿಕೊಂಡು ಸರ್ವೆ ನಂ.314 ಹಿಸ್ಸಾ 1 ರ ಭಾಗಾಯತ ಜಾಗೆಗಳಿಗೆ ನೀರಿನ ಪೂರೈಕೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸರ್ವೆ ನಂ.314 ಹಿಸ್ಸಾ 8 ಹಾಗೂ ಸರ್ವೆ ನಂ.314 ಹಿಸ್ಸಾ 1 ರ ನಡುವೆ ದಕ್ಷಿಣೋತ್ತರವಾಗಿ ಯಾವುದೇ ಪೈಪಲೈನಗಳು ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.314 ಹಿಸ್ಸಾ 1 ಹಾಗೂ ಸರ್ವೆ ನಂ.314 ಹಿಸ್ಸಾ 8 ರ ನಡುವೆ ಸರ್ವೆ ನಂ.314 ಹಿಸ್ಸಾ 2, 3 ಹಾಗೂ 4 ರ ಸ್ಥಳಗಳು ಇವೆ ಎಂದರೆ ಸರಿ. ಸರ್ವೆ ನಂ.314 ಹಿಸ್ಸಾ 2, 3 ಹಾಗೂ 4 ರ ಸ್ಥಳಗಳಲ್ಲಿ ಕೋರ್ಟ ಕಮೀಷನರ ರವರು ಪೈಪಲೈನ ಅಸ್ತಿತ್ವದ ಕುರಿತು ನಮ್ಮ ಸೂಚನೆಯ ಪ್ರಕಾರ ಅಗದು ನೋಡಿದ್ದಾರೆ ಎಂದರೆ ಸಾಕ್ಷಿಯು ಸರ್ವೆ ನಂ.314 ಹಿಸ್ಸಾ 8 ಹಾಗೂ 4 ರ ಗಡಿಯಲ್ಲಿ ಮಾತ್ರ ಅಗದು ನೋಡಿರುತ್ತಾರೆ ಎಂದು ನುಡಿಯುತ್ತಾರೆ.

ಕೋರ್ಟ ಕಮೀಷನರವರು ಸರ್ವೆ ನಂ.314 ಹಿಸ್ಸಾ 8 ಹಾಗೂ ಸರ್ವೆ ನಂ.314 ಹಿಸ್ಸಾ 1 ರ ನಡುವೆ ಇರುವ ಎಲ್ಲಾ ಹಿಸ್ಸಾಗಳ ನಡುವೆಯೂ ನಮ್ಮ ಸೂಚನೆಯಂತೆ ಪೈಪಲೈನ್ ಆಸ್ತಿತ್ವ ದ ಬಗ್ಗೆ ಅಗೆದು ನೋಡಿ ಅಲ್ಲಿ ಪೈಪಲೈನ್ ಇಲ್ಲದ ಕಾರಣ ಅಗೆದು ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದ್ರಿ ಜಾಗದಲ್ಲಿ ಈಗಲೂ ಸಹ ಪೈಪಲೈನ್‌ಗಳು ಇವೆ ಎಂದು ನುಡಿಯುತ್ತಾರೆ. ಸರ್ವೆ ನಂ.313 ಹಿಸ್ಸಾ 3 ರ ಉತ್ತರ ದಿಕ್ಕಿಗೆ ಸರ್ವೆ ನಂ.313 ಹಿಸ್ಸಾ 4 ರ ಸ್ಥಳ ಇದೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ವಕೀಲರಿಗೆ ಹಾತ್ ನಕಾಶೆ ತಯಾರಿಸುವ ಸಂದರ್ಭದಲ್ಲಿ ಸರ್ವೆ ನಂ.313 ಹಿಸ್ಸಾ 4 ರ ಬಗ್ಗೆ ಮಾಹಿತಿಯನ್ನು ನೀಡಿದ್ದೇನೋ ಇಲ್ಲವೋ ಎಂಬ ಬಗ್ಗೆ ನನಗೆ ಈಗ ನೆನಪಿಲ್ಲ. ನಾನು ದಾವೆಯ ಸಂಗಡ ಹಾಜರುಪಡಿಸಿದ ಹಾತ್ ನಕಾಶೆಯು ಸ್ಥಳೀಯ ವಸ್ತುಸ್ಥಿತಿಯಂತೆ ಹಾಗೂ ಸರ್ವೆ ದಾಖಲಾತಿಗಳ ಪ್ರಕಾರ ಇಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳ ವಿರುದ್ಧ ಮಧ್ಯಂತರ ಆದೇಶವನ್ನು ಪಡೆದುಕೊಳ್ಳುವ ಸಲುವಾಗಿ ಸುಳ್ಳು ಮಾಹಿತಿಯನ್ನು ನೀಡಿ ಅಂದಾಜಿನ ಮೇಲೆ ಹಾತ್ ನಕಾಶೆಯನ್ನು ತಯಾರು ಮಾಡಲು ಮಾಹಿತಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ದಾವಾ ಪತ್ರದಲ್ಲಿ ಹಾಗೂ ಹಾತ ನಕಾಶೆಯಲ್ಲಿ ತೋರಿಸಿದಂತೆ ಯಾವುದೇ ಕಾಲು ದಾರಿ ಹಾಗೂ ನೀರಿನ ದಾರಿ ಇಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ